## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 233 |
| **ಸದಸ್ಯರ ಹೆಸರು** | : | ಶ್ರೀ. ಬಿ.ಎಂ. ಫಾರುಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 14.02.2024. |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಉಳ್ಳಾಲ-ಸೋಮೇಶ್ವರದ ಕಡಲ ತೀರದ ರಸ್ತೆಗಳು ಹಾಗೂ ಸಾರ್ವಜನಿಕ ಆಸ್ತಿಗಳು ಕಡಲ್ಕೊರೆತದಿಂದ ಕೊಚ್ಚಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ತುರ್ತು ಸಂದರ್ಭಗಳಲ್ಲಿ ತೀವ್ರ ಅನಾರೋಗ್ಯ ಅವಗಡ ಜೀವ ಜಾನುವಾರು ಪ್ರಾಣ ಹಾನಿಯಾದರೆ ಇದಕ್ಕೆ ಯಾರನ್ನು ಹೊಣೆಗಾರಿಕೆನ್ನಾಗಿ ಮಾಡಲಾಗುವುದು; ಯಾರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಈ ಬಗ್ಗೆ ಸರ್ಕಾರದ ನಿಲುವುಗಳೇನು; (ವಿವರ ನೀಡುವುದು) | ತುರ್ತು ಸಂದರ್ಭಗಳಲ್ಲಿ ತೀವ್ರ ಅನಾರೋಗ್ಯ ಅವಗಡ ಜೀವ ಜಾನುವಾರು ಪ್ರಾಣ ಹಾನಿಯಾದ ಸಂದರ್ಭಗಳಲ್ಲಿ ತುರ್ತಾಗಿ ಸ್ಪಂದಿಸಿ ಸೂಕ್ತ ಕ್ರಮಗಳನ್ನು ಕರಾವಳಿ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಎಲ್ಲಾ ಇಲಾಖೆಗಳನ್ನೊಳಗೊಂಡ ಜಿಲ್ಲಾ ವಿಪತ್ತು ನಿರ್ವಹಣೆ ಕೇಂದ್ರದಿಂದ ಕೈಗೊಳ್ಳಲಾಗುತ್ತಿದೆ. |
| ಇ) | ಪ್ರತಿ ವರ್ಷವೂ ಪುನರಾವರ್ತನೆಯಾಗುವ ಕಡಲ್ಕೊರೆತದಿಂದಾಗುವ ಹಾನಿ ತಪ್ಪಿಸಲು ದೀರ್ಘಕಾಲಿಕ ಶಾಶ್ವತ ಯೋಜನೆಗಳಿವೆಯೇ; ಕಳೆದ 2-3 ವರ್ಷಗಳಲ್ಲಿ ಹಾನಿಯಾದ ಬಗ್ಗೆ ವಿವರ ನೀಡುವುದು ? | • ಕರಾವಳಿಯ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ದೀರ್ಘಕಾಲಿಕ ಸಮುದ್ರ ಕೊರೆತ ತಡೆಯಲು ಅನುದಾನದ ಲಭ್ಯತೆಗನುಗುಣವಾಗಿ ಪರಿಣಿತ ಸಂಸ್ಥೆಗಳಾದ ಕೇಂದ್ರೀಯ ಜಲ ಮತ್ತು ಶಕ್ತಿ ಸಂಶೋಧನಾ ಕೇಂದ್ರ, ಪುಣೆ (CWPRS) ಹಾಗೂ ಕರ್ನಾಟಕ ಇಂಜಿನೀಯರಿಂಗ್ ಸಂಶೋಧನಾ ಕೇಂದ್ರ (KERS), ಕೃಷ್ಣರಾಜಸಾಗರ ಇವರಿಂದ ಸೂಕ್ತ ಸ್ಥಳ ವಿನ್ಯಾಸವನ್ನು ಪಡೆದು ದೀರ್ಘಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ, ಗ್ರಾಯನ್ಸ್ ಮಾದರಿಯ ತಡೆಗೋಡೆಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನ ನೆರವಿನ ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯ ಟ್ರಾಂಚ್-1 ಹಾಗೂ ಟ್ರಾಂಚ್-2 ರಡಿ ಕರ್ನಾಟಕದ ಕಡಲ ತೀರ ಸಂರಕ್ಷಣೆಗಾಗಿ ಆಯ್ದ ಸ್ಥಳಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | • ಈ ಯೋಜನೆಯಡಿಯಲ್ಲಿ ಉಳ್ಳಾಲ-ಸೋಮೇಶ್ವರ ಕಡಲ ತೀರ ಪ್ರದೇಶಗಳಲ್ಲಿ ಈಗಾಗಲೇ ಟ್ರಾಂಚ್-1 ಮತ್ತು 2 ರಡಿಯಲ್ಲಿ ಆಫ್‌ಶೋರ್ ರೀಫ್, ಇನ್ ಶೋರ್ ಬರ್ಮ್‌ಗಳು, ಅಲೆ ತಡೆಗೋಡೆಗಳ ಪುನರ್ ನಿರ್ಮಾಣ, ರಾಕ್ ರಿವೆಟ್‌ಮೆಂಟ್ ಮತ್ತು ಮರಳು ಪೋಷಣೆಗಳಂತಹ ಕಾಮಗಾರಿಗಳನ್ನು ₹355.00 ಕೋಟಿಗಳಲ್ಲಿ ಕೈಗೊಂಡಿದ್ದು, ಏಪ್ರಿಲ್ 2021 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ.<br><br>• ಉಳ್ಳಾಲ ಮತ್ತು ಸೋಮೇಶ್ವರ ಪ್ರದೇಶದ ಕಳೆದ 2-3 ವರ್ಷಗಳಲ್ಲಿ ಸಂಭವಿಸುತ್ತಿರುವ ಸಮುದ್ರ ಕೊರೆತಕ್ಕೆ ಸಂಬಂಧಿಸಿದಂತೆ ಎಡಿಬಿ ಟ್ರಾಂಚ್-3 ಯೋಜನೆಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.<br><br>• ಉಚ್ಚಿಲ-ಬಟ್ಟಪ್ಪಾಡಿ ಪ್ರದೇಶದ ಸಮುದ್ರ ಕೊರೆತಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ವಿನ್ಯಾಸ ವರದಿ ನೀಡುವಂತೆ NITK ಸುರತ್ಕಲ್ ರವರಿಂದ ಪಡೆಯುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.<br><br>• ಸಮುದ್ರ ಕೊರೆತದಿಂದ ಹಾನಿಗೀಡಾದ ಉಚ್ಚಿಲ-ಬಟ್ಟಪ್ಪಾಡಿ ಸಂಪರ್ಕ ರಸ್ತೆ ಪುನರ್ ನಿರ್ಮಾಣಕ್ಕೆ 2022-23 ನೇ ಸಾಲಿನಲ್ಲಿ SDRF ಯೋಜನೆಯಡಿ Restoration of Approach Road with side protection works in Uchila-Battapadi, Meenakaliya and Surathkal Light House in Dakshina Kannada District ಕಾಮಗಾರಿಯು ಮಂಜೂರಾಗಿದ್ದು, CRZ ನಿರಾಕ್ಷೇಪಣೆ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>• ಕಳೆದ 2-3 ವರ್ಷಗಳಲ್ಲಿ ಉಚ್ಚಿಲ ಬಟ್ಟಪಾಡಿ ಸಮುದ್ರ ಕೊರೆತದಿಂದಾಗಿ ತೀರದಲ್ಲಿ ಸುಮಾರು 500 ಮೀ ಉದ್ದದ ಸಂಪರ್ಕ ರಸ್ತೆ ಸಮುದ್ರ ಪಾಲಾಗಿರುತ್ತದೆ. |

**IDD 22 PSP 2024 (E-1316192)**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**